**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

ಎಸ್ .ಸಿ. ನಂಃ **48/2021**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ **13**
ಸಿ.ಡಬ್ಲ್ಯೂ ನಂಃ **16**
ಸಾಕ್ಷಿಯನ್ನು ದಿನಾಂಕಃ **12-08-2025**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | ಃ | ರಮೇಶ |
| ತಂದೆಯ ಹೆಸರು | ಃ | ವೀರಣ್ಣ |
| ವಯಸ್ಸು | ಃ | 36 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸ ಸ್ಥಳ | ಃ | ಚೌಡಾಪುರ |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ಚಾಸಾ 12 ಗೊತ್ತು. ಮೃತ ಸುಮಿತ್ರಾ ಅವರ ಮಗಳು. ಈಗ ನ್ಯಾಯಾಲಯದಲ್ಲಿರುವ ಆರೋಪಿ ಆಕೆಯ ಗಂಡ. ಸುಮಾರು 12-13 ವರ್ಷಗಳ ಹಿಂದೆ ಅವರ ಮದುವೆಯಾಗಿತ್ತು. ಅವರಿಗೆ ಇಬ್ಬರು ಮಕ್ಕಳು. ಮದುವೆಯಾದನಂತರ ಕೆಲವು ವರ್ಷಗಳು ಚೆನ್ನಾಗಿದ್ದರು. ಆ ನಂತರ ನೀನು ಸರಿ ಇಲ್ಲ ನೀನು ಸತ್ತರೆ ನಾನು ಇನ್ನೊಂದು ಮದುವೆ ಆಗುತ್ತೇನೆ ಎಂದು ಕಿರುಕುಳ ಕೊಟ್ಟು ಹೊಡೆ-ಬಡಿ ಮಾಡುತ್ತಿದ್ದ. ಸುಮಿತ್ರಾ ತವರು ಮನೆಗೆ ಬಂದಾಗ ಈ ವಿಚಾರವನ್ನು ನನಗೆ ಹೇಳುತ್ತಿದ್ದಳು. ಆಗ ಊರಿನ 4 ಮಂದಿಯನ್ನು ಕರೆದುಕೊಂಡು ಹೋಗಿ ಆರೋಪಿಗೆ ಬುದ್ಧಿವಾದ ಹೇಳಿ ಬಂದಿದ್ದೆವು. ಆದರೂ ಸಹಾ ಆರೋಪಿ ಸುಧಾರಿಸಿರಲಿಲ್ಲ.

2). ದಿಃ 28-4-2021 ರಂದು ಆಕೆ ವಿಷ ಸೇವನೆ ಮಾಡಿ ಮಗನಿಗೂ ಸಹಾ ವಿಷ ಕುಡಿಸಿದ್ದಾಳೆಂದು ಯಡ್ದೋಣಿಯಿಂದ ನನಗೆ ಫೋನು ಬಂದಿತ್ತು. ಈ ವಿಚಾರವನ್ನು ನಾನು ದೇವರಾಜಗೆ ಫೋನು ಮಾಡಿ ತಿಳಿಸಿದೆ. ವಿಚಾರ ತಿಳಿದು ನಾನು, 4-5 ಜನರು ಕುಷ್ಟಗಿ ತಾಲ್ಲೂಕ ಆಸ್ಪತ್ರೆಗೆ ಹೋದೆವು. ಅಲ್ಲಿಂದ ಕೊಪ್ಪಳ ಜಿಲ್ಲಾ ಆಸ್ಪತ್ರೆಗೆ ಅವರನ್ನು ಕಳುಹಿಸಿದ್ದರು. ಅದೇ ದಿನ ರಾತ್ರಿ 10-30 ಗಂಟೆಗೆ ಸುಮಿತ್ರಾ ತೀರಿಕೊಂಡಿದ್ದು, 11 ಗಂಟೆಗೆ ಆಕೆಯ ಮಗ ತೀರಿಕೊಂಡಿದ್ದ. ಅವರ ಸಾವಿಗೆ ಆರೋಪಿಯೇ ಕಾರಣ.

ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ

ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಯಾವುದೇ ಸಕಾರಣವಿಲ್ಲದೇ ಇದ್ದುದರಿಂದ ಕೋರಿಕೆಯನ್ನು ತಿರಸ್ಕರಿಸಿ ಸದರಿ ಸಾಕ್ಷಿದಾರರ ಪಾಟೀಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ

**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

ಎಸ್ .ಸಿ. ನಂಃ **48/2021**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ **12**
ಸಿ.ಡಬ್ಲ್ಯೂ ನಂಃ **15**
ಸಾಕ್ಷಿಯನ್ನು ದಿನಾಂಕಃ **12-08-2025**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಶರಣಪ್ಪ |
| ತಂದೆಯ ಹೆಸರು | ಃ | ಯಮನೂರಪ್ಪ |
| ವಯಸ್ಸು | ಃ | **39** ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸ ಸ್ಥಳ | ಃ | ಚೌಡಾಪುರ |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ಚಾಸಾ **12** ಗೊತ್ತು. ಮೃತ ಸುಮಿತ್ರಾ ಅವರ ಹಿರಿಯ ಮಗಳು. ಈಗ ನ್ಯಾಯಾಲಯದಲ್ಲಿರುವ ಆರೋಪಿ ಆಕೆಯ ಗಂಡ. ಸುಮಾರು **10-12** ವರ್ಷಗಳ ಹಿಂದೆ ಅವರ ಮದುವೆಯಾಗಿತ್ತು. ಅವರಿಗೆ ಇಬ್ಬರು ಗಂಡು ಮಕ್ಕಳು. ಅವರು ಸುಮಾರು **5-6** ವರ್ಷ ಚೆನ್ನಾಗಿದ್ದರು. ಆ ನಂತರ ನೀನು ಸರಿ ಇಲ್ಲ ನೀನು ಸತ್ತರೆ ನಾನು ಇನ್ನೊಂದು ಮದುವೆ ಆಗುತ್ತೇನೆ ಎಂದು ಕಿರಿಕಿರಿ ಮಾಡುತ್ತಿದ್ದ. ಸುಮಿತ್ರಾ ಊರಿಗೆ ಬಂದಾಗ ಈ ವಿಚಾರ ಹೇಳುತ್ತಿದ್ದಳು. ಆಗ ಊರಿನ **4** ಮಂದಿಯನ್ನು ಕರೆದುಕೊಂಡು ಹೋಗಿ ಆರೋಪಿಗೆ ಬುದ್ದಿವಾದ ಹೇಳಿ ಬಂದಿದ್ದೆ. ಆದರೆ ಪುನಃ ಅದೇ ರೀತಿ ಕಿರುಕುಳ ಕೊಡಲು ಮುಂದುವರಿಸಿದ್ದ.

**2).** ದಿಃ **26-4-2021** ರಂದು ಹಿರೇವಂಕಲಕುಂಟಾದ ಕಟ್ಟಿಮನಿ ಆಸ್ಪತ್ರೆಯಲ್ಲಿ ಅವರ ತಾಯಿಗೆ ಶಸ್ತ್ರಚಿಕಿತ್ಸೆ ಮಾಡಲಾಗಿತ್ತು. ಅವರನ್ನು ಮಾತನಾಡಿಸಲು ಸಮಿತ್ರಾ ಹಾಗೂ ಮಕ್ಕಳು ಬಂದಿದ್ದರು. ಮಾತನಾಡಿಸಿಕೊಂಡು **12** ಗಂಟೆಗೆ ಯಡ್ಡೋಣಿಗೆ ಹೋಗಿದ್ದಳು. ಸಂಜೆ **5** ಗಂಟೆಗೆ ಆಕೆ ಮತ್ತು ಮಗ ವಿಷ ಕುಡಿದಿದ್ದಾರೆ ಮತ್ತು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ ಎಂದು ಯಡ್ಡೋಣಿಯಿಂದ ಫೋನು ಬಂತು. ಯಾರಾದರೂ ಒಬ್ಬರು ಹೋಗಿರಿ ಎಂದು ನಾವು ಮೃತಳ ತಮ್ಮಂದಿರಿಗೆ ಹೇಳಿದೆ. ಕುಷ್ಟಗಿಯಿಂದ ಜಿಲ್ಲಾ ಆಸ್ಪತ್ರೆಗೆ ತಾಯಿ ಮಗನನ್ನು

ಕಳುಹಿಸಿಕೊಟ್ಟಿದ್ದರು. ಅದೇದಿನ ಅಂದರೆ ದಿಃ **28-4-2021** ರಂದು ರಾತ್ರಿ **10-30** ರಿಂದ **11** ಗಂಟೆಗೆ ಅವರಿಬ್ಬರೂ ತೀರಿಕೊಂಡಿದ್ದರು. ಅವರ ಸಾವಿಗೆ ಆರೋಪಿಯೇ ಕಾರಣ.

ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ

ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಯಾವುದೇ ಸಕಾರಣವಿಲ್ಲದೇ ಇದ್ದುದರಿಂದ ಕೋರಿಕೆಯನ್ನು ತಿರಸ್ಕರಿಸಿ ಸದರಿ ಸಾಕ್ಷಿದಾರರ ಪಾಟೀಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ

**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

<u>ಎಸ್ .ಸಿ. ನಂಃ **48/2021**</u>

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ **11**
ಸಿ.ಡಬ್ಲ್ಯೂ ನಂಃ **14**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಪುರುಷೋತ್ತಮ |
| ತಂದೆಯ ಹೆಸರು | ಃ | ಪ್ರಕಾಶ |
| ವಯಸ್ಸು | ಃ | **13** ವರ್ಷ |
| ಉದ್ಯೋಗ | ಃ | **8** ನೇ ತರಗತಿ |
| ವಾಸ ಸ್ಥಳ | ಃ | ಚೌಡಾಪುರ |

ಸಾಕ್ಷಿದಾರರು ಅಪ್ರಾಪ್ತ ವಯಸ್ಕನಾದ ಕಾರಣ ಆತ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯಲು ಸಮರ್ಥನಾಗಿರುತ್ತಾನೆಯೋ ಎಂದು ಖಚಿತಪಡಿಸಿಕೊಳ್ಳಲು ಈ ಕೆಳಕಂಡ ಸಾಮಾನ್ಯ ಜ್ಞಾನ ಪ್ರಶ್ನೆಗಳನ್ನು ಆತನಿಗೆ ಕೇಳಲಾಯಿತು.

<u>**ನ್ಯಾಯಾಲಯದ ಪ್ರಶ್ನೆಗಳು**</u>

**ಪ್ರಶ್ನೆಃ** ಯಾವ ಶಾಲೆಯಲ್ಲಿ ಓದುತ್ತಿದ್ದೀಯಾ?

**ಉಃ** ನಿವೇದಿತಾ ಪ್ರೌಢಶಾಲೆ,

**ಪ್ರಶ್ನೆಃ** ಎಷ್ಟು ವರ್ಷದಿಂದ ಆ ಶಾಲೆಯಲ್ಲಿ ಓದುತ್ತಿದ್ದೀಯಾ?

**ಉಃ** ಈ ವರ್ಷ ಸೇರಿಕೊಂಡಿದ್ದೇನೆ.

ಪ್ರಶ್ನೆಃ **1** ರಿಂದ **7** ನೇ ತರಗತಿಯವರೆಗೂ ಎಲ್ಲಿ ಓದಿದ್ದಿಯಾ?

ಉಃ ತಾಳಕೇರಿ. ಶಾಲೆಯ ಹೆಸರು ನೆನಪಿಲ್ಲ.

**ಪ್ರಶ್ನೆಃ** ಇವತ್ತು ಎಲ್ಲಿಗೆ ಯಾವ ಕಾರಣಕ್ಕಾಗಿ ಬಂದಿದ್ದಿಯಾ?

**ಉಃ** ನನ್ನ ತಾಯಿ ಕೊಲೆ ಆದ ವಿಚಾರದಲ್ಲಿ ಸಾಕ್ಷಿ ನುಡಿಯಲು ನ್ಯಾಯಾಲಯಕ್ಕೆ ಬಂದಿದ್ದೇನೆ.

ಈ ಪ್ರಕರಣ ಸಾಕ್ಷಿದಾರರ ತಾಯಿಯ ಆತ್ಮಹತ್ಯೆ ಪ್ರಕರಣವಾಗಿದ್ದು, ಆಕೆಯ ಕೊಲೆ ಕೇಸಿನಲ್ಲಿ ಸಾಕ್ಷಿ ನುಡಿಯಲು ಬಂದಿರುವುದಾಗಿ ಸಾಕ್ಷಿದಾರರು ತಿಳಿಸಿದ್ದು, ಇವರಿಗೆ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕೇಳುವ ಪ್ರಶ್ನೆಗಳನ್ನು ಅರ್ಥೈಸಿಕೊಂಡು ಉತ್ತರಿಸುವ ಸಾಮರ್ಥ್ಯ ಇಲ್ಲಾ ಎಂದು ಕಂಡುಬಂದ ಕಾರಣ ಆತನನ್ನು ಬಿಡುಗಡೆಗೊಳಿಸಲಾಗಿದೆ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ

**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

**ಎಸ್ .ಸಿ. ನಂಃ 48/2021**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ **10**
ಸಿ.ಡಬ್ಲ್ಯೂ ನಂಃ **13**
ಸಾಕ್ಷಿಯನ್ನು ದಿನಾಂಕಃ **12-08-2025**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | ಃ | ದೇವರಾಜ |
| ತಂದೆಯ ಹೆಸರು | ಃ | ಗವಿಸಿದ್ದಪ್ಪ |
| ವಯಸ್ಸು | ಃ | 23 ವರ್ಷ |
| ಉದ್ಯೋಗ | ಃ | ಸ್ವಿಗ್ಗಿ ಡಿಲೇವರಿ ಬಾಯ್ |
| ವಾಸ ಸ್ಥಳ | ಃ | ಬೆಂಗಳೂರು |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ಚಾಸಾ 1 ನನ್ನ ಅಣ್ಣ. ಚಾಸಾ 12 ನನ್ನ ತಂದೆ. ಚಾಸಾ 14 ನನ್ನ ಅಕ್ಕನ ಮಗಳು. ನಾವು 3 ಜನ ಮಕ್ಕಳು. ಮೃತ ಸುಮಿತ್ರಾ ನನ್ನ ಅಕ್ಕ. ಆರೋಪಿ ಆಕೆಯ ಗಂಡ. ಸುಮಾರು 13-14 ವರ್ಷಗಳ ಹಿಂದೆ ಅವರ ಮದುವೆಯಾಗಿತ್ತು. ಅವರಿಗೆ ಪುರುಷೋತ್ತಮ, ರಾಜೇಂದ್ರಪ್ರಸಾದ ಎಂಬ ಇಬ್ಬರು ಮಕ್ಕಳು. 3-4 ವರ್ಷಗಳು ಆರೋಪಿ ನಮ್ಮ ಅಕ್ಕನನ್ನು ಚೆನ್ನಾಗಿ ನೋಡಿಕೊಂಡಿದ್ದ. ಆ ನಂತರ ನೀನು ಸರಿ ಇಲ್ಲ ನಿನ್ನ ನಡತೆ ಸರಿ ಇಲ್ಲಾ, ನಾನು ಇನ್ನೊಂದು ಮದುವೆ ಆಗುತ್ತೇನೆ ನೀನು ಸತ್ತು ಹೋಗು ಎಂದು ಕಿರುಕುಳ ಕೊಡುತ್ತಿದ್ದ. ನನ್ನ ಅಕ್ಕ ಊರಿಗೆ ಬಂದಾಗಲೆಲ್ಲಾ ಅತ್ತುಕೊಂಡು ಈ ವಿಚಾರ ಹೇಳುತ್ತಿದ್ದಳು. ನಮ್ಮ ತಂದೆ ತಾಯಿ ಊರಿನವರನ್ನು ಕರೆದುಕೊಂಡು ಹೋಗಿ ಬುದ್ದಿಮಾತು ಹೇಳಿ ಬಂದಿದ್ದರು. ಅವರು ಸ್ವಲ್ಪ ದಿನ ಚೆನ್ನಾಗಿದ್ದು ಪುನಃ ಅದೇ ರೀತಿ ಕಿರುಕುಳ ಕೊಡಲು ಮುಂದುವರಿಸಿದ್ದ.

2). ದಿಃ 26-4-2021 ರಂದು ಹಿರೇವಂಕಲಕುಂಟಾದ ಕಟ್ಟಿಮನಿ ಆಸ್ಪತ್ರೆಯಲ್ಲಿ ನಮ್ಮ ತಾಯಿಗೆ ಶಸ್ತ್ರಚಿಕಿತ್ಸೆ ಮಾಡಿಸಿದ್ದೆವು. ನಮ್ಮ ತಾಯಿಯನ್ನು ಮಾತನಾಡಿಸಲು ನಮ್ಮ ಅಕ್ಕ ಮತ್ತು ಚಾಸಾ 14 ಬಂದಿದ್ದರು. 28 ನೇ ತಾರೀಖು ಸುಮಾರು 12 ಗಂಟೆಗೆ ಯಡ್ಡೊಣಿಯ ಗಂಡನ ಮನೆಗೆ ಹೋದಳು. ಯಡ್ಡೋಣಿಗೆ ನಮ್ಮ ಅಕ್ಕ ಮತ್ತು ಚಿಕ್ಕ ಮಗನಾದ ರಾಜೇಂದ್ರ ವಾಪಸ್ ಹೋದರು. ಸಂಜೆ 4 ರಿಂದ 4-30

ಗಂಟೆಗೆ ನಮ್ಮೂರಿನ ರಮೇಶ ಎನ್ನುವವರು ನನಗೆ ಫೋನು ಮಾಡಿ ನಿಮ್ಮ ಅಕ್ಕ ಮತ್ತು ಅಕ್ಕನ ಮಗ ವಿಷ ತೆಗೆದುಕೊಂಡು ಕುಷ್ಟಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ ಎಂಬುವ ವಿಚಾರ ತಿಳಿಸಿದ. ನಾನು ಆಸ್ಪತ್ರೆಗೆ ಹೋಗಿ ನೋಡಿದಾಗ ಆರೋಪಿಯ ಅಣ್ಣ ಅಮರೇಶಪ್ಪ ಇದ್ದರು. ಅವರನ್ನು ವಿಚಾರಿಸಿದಾಗ ನಿಮ್ಮ ಅಕ್ಕ ವಿಷ ಸೇವನೆ ಮಾಡಿ ಮಗನಿಗೂ ಸಹಾ ಕುಡಿಸಿ ತೀರಿಕೊಂಡಿದ್ದಾರೆ ಎಂದು ತಿಳಿಸಿದರು. ವೈದ್ಯರ ಸಲಹೆಯ ಮೇರೆಗೆ ನಾನು ಅಂಬುಲೆನ್ಸನಲ್ಲಿ ನಮ್ಮ ಅಕ್ಕ ಮತ್ತು ಅಕ್ಕನ ಮಗನನ್ನು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಬಂದೆ. ರಾತ್ರಿ **10-30** ಗಂಟೆಗೆ ನಮ್ಮ ಅಕ್ಕ ತೀರಿಕೊಂಡಳು. ರಾತ್ರಿ **11** ಗಂಟೆಗೆ ನಮ್ಮ ಅಕ್ಕನ ಚಿಕ್ಕ ಮಗ ಸಹಾ ತೀರಿಕೊಂಡ. ಪ್ರತಿ ದಿನ ಆರೋಪಿ ನನ್ನ ಅಕ್ಕನಿಗೆ ಹಿಂಸೆ ಕೊಟ್ಟ ಕಾರಣ ಅವರ ಸಾವಿಗೆ ಆಆರೋಪಿಯೇ ಕಾರಣನಾಗಿರುತ್ತಾನೆ.

ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ

ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಯಾವುದೇ ಸಕಾರಣವಿಲ್ಲದೇ ಇದ್ದುದರಿಂದ ಕೋರಿಕೆಯನ್ನು ತಿರಸ್ಕರಿಸಿ ಸದರಿ ಸಾಕ್ಷಿದಾರರ ಪಾಟೀಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ